Minister he has assured that a joint sector factory will be coming up in Chittapur. That assurance has been given on the floor of the House. It was given by the previous Minister. That plea is there for the last 10 years. Every time we go and say at the time of election or any other time that cement factory is coming up. What I submit is that there are...

MR. DEPUTY SPEAKER.—You taken up this issue in the Assurance Committee.

ಶ್ರೀ ಷೇರ್‌ಖಾನ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಪರಿಶಿಷ್ಟ ಪಟ್ಟಿ ಲೆರಲ್ಲಿ ಇಂಡಿಯನ್ ರೇಯನ್ ಕಾರ್ಪೊರೇಷನ್ ಲಿಮಿಟೆಡ್, ಗುಜರಾತ್, ಇದರ ಲೊಕೇಷನ್, ಚಿತಾಪುರ್, ತಾಲೂಕು ಗುಲ್ಬರ್ಗ, ಡಿಸ್ಟ್ರಿಕ್ಟ್ ಎಂದು ಬರೆದಿದ್ದಾರೆ, ಇದು ಕರೆಕ್ಟ್ ಇದೆಯೇ ತಿಳಿಸಬೇಕು?

SRI M. VEERAPPA MOILY.—It is in Sedam. I do not have particulars of actual location of the village and hobli.

ಶ್ರೀ ಷೇರ್‌ಖಾನ್.— ಇನ್ನು ಎರಡನೆಯದಾಗಿ ಇನ್ನೊಂದು ಸೌತ್ ಇಂಡಿಯಾ ಸಿಮೆಂಟ್ ಪ್ರೈವೇಟ್ ಲಿಮಿಟೆಡ್ ಸೇಡಮ್, ಗುಲ್ಬರ್ಗ ಡಿಸ್ಟ್ರಿಕ್ಟ್ ಎಂದು ಕೊಟ್ಟಿದ್ದಾರೆ. ಇದು ಆಕ್ಚುಯಲ್ ಪೆ ಸ್ ಯಾವುದು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

SRI M. VEERAPPA MOILY.—I do not have details. It is in Malke.

SRI PRABHAKAR TELKAR.—Now these factories are coming up in Chittapur and Sedam and as there are so many difficulties, in order to give the enterpreneurs a sort of encouragement, will the Government think of taking up development measurers like laying of roads other factors which are quite essential for running of these areas?

SRI M. VEERAPPA MOILY.—This can be looked into as and when it comes.

Agricultural Farms in the State

445. SRI K.H. HANUME GOWDA (Hassan).— Will the Chief Minister be pleased to state.—

(a) the agricultural farms existing in different parts of the State;

(b) the extent of each farm

(c) the amount spent in each farm for agriculture for the last three years;

(d) the annual income derived in each farm?

SRI R. GUNDU RAO (Chief Minister).—

(a) (b) (c) (d) Replies are laid on the table.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ. ನಮ್ಮ ರಾಜ್ಯದಲ್ಲಿ ೬೧ ಅಗ್ರಿಕಲ್ಚರಲ್ ಫಾರಂಗಳಿವೆ ಎಂದು ಇಲ್ಲಿ ತಿಳಿಸಿದ್ದೀರಿ. ೧೯೭೯-೮೦ನೇ ಸಾಲಿನಲ್ಲಿ ಈ ಎಲ್ಲಾ ಫಾರಂಗಳಿಗೂ ಎಷ್ಟು ಹಣವನ್ನು ಖರ್ಚುಮಾಡಿದ್ದೀರಿ ಮತ್ತು ತಮಗೆ ಎಷ್ಟು ಉತ್ಪತ್ತಿ ಬಂತು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಸಹಕಾರ ಸಚಿವರು) ಮುಖ್ಯಮಂತ್ರಿಗಳ ಪರವಾಗಿ).—ನಾವು ಖರ್ಚುಮಾಡಿದ್ದು ೫೨ ಲಕ್ಷ ರೂ ನಮಗೆ ಆದಾಯ ಬಂದಿದ್ದು ೩೫-೪೦ ಲಕ್ಷ ರೂ.

ಶ್ರೀ ಕೆ. ಹೆಚ್. ಹನುಮೇಗೌಡ.—೫೨ ಲಕ್ಷ ರೂ. ಖರ್ಚುಮಾಡಿದೆ ಎಂದು ತಿಳಿಸಿದಿರಿ ಇದರಲ್ಲಿ ಸಿಬ್ಬಂದಿ ಖರ್ಚು, ಬಿತ್ತನೆ ಬೀಜ, ಉಳುಮೆ ಎಲ್ಲಾ ಸೇರಿದೆಯೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧಿಕಾರಿಗಳ ಸಂಬಳ, ಉಳುಮೆ, ಬಿತ್ತನೆ ಬೀಜ ಎಲ್ಲಾ ಸೇರಿಕೊಂದಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ವ್ಯವಸಾಯ ಫಾರಂಗಳಲ್ಲಿ ಒಳ್ಳೆಯ ಅನುಭವೀ ತಜ್ಞರಿದ್ದಾರೆ, ಉತ್ತಮ ಉಪಕರಣಗಳಿವೆ, ನೀರಿನ ಅನುಕೂಲವಿದೆ. ಕಾಲಕ್ಕೆ ಸರಿಯಾಗಿ ಅಗ್ರಿಕಲ್ಚರಲ್ ಇನ್‌ಪುಟ್ಸ್ ಏನೇನು ಬೇಕೋ ಅವೆಲ್ಲಾ ಸಿಕ್ಕುತ್ತವೆ. ಇಷ್ಟಾದರೂ ಕೂಡ ತಾವು ೫೨ ಲಕ್ಷ ರೂ. ಗಳನ್ನು ಖರ್ಚುಮಾಡಿ ನಷ್ಟ ಅನುಭವಿಸಲು ಕಾರಣ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಮ್ಮ ಸರ್ಕಾರದ ಬೀಜೋತ್ಪಾದನಾ ಕೇಂದ್ರ ಇರುವುದು ಕೇವಲ ರೈತರಿಗೆ ಸಹಾಯ ಮಾಡುವುದಕ್ಕಾಗಿ. ಉತ್ತಮ ಬೀಜಗಳನ್ನು ಒದಗಿಸಬೇಕೆಂಬ ಉದ್ದೇಶದಿಂದಲೇ ಹೊರತು ಲಾಭ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಅಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಮ್ಮ ಫಾರಂಗಳಲ್ಲಿ ಬೀಜೋತ್ಪಾದನೆ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ನಮ್ಮ ರಾಜ್ಯಕ್ಕೆ ಒಟ್ಟು ಎಷ್ಟು ಬಿತ್ತನೆ ಬೀಜದ ಅವಶ್ಯಕತೆ ಇದೆ ಮತ್ತು ತಾವು ಎಷ್ಟು ಉತ್ಪಾದನೆ ಮಾಡುತ್ತೀದ್ದಿರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆ ಅಂಶಗಳು ನನ್ನ ಹತ್ತಿರ ಇಲ್ಲ. ತಾವು ಬೇಕೆಂದು ಕೇಳುವುದಾದರೆ ತರಿಸಿಕೊಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಬಿತ್ತನೇ ಬೀಜವನ್ನು ಉತ್ಪಾದನೆ ಮಾಡುತ್ತಿರುವುದರಿಂದ ನಷ್ಟವಾಗುತ್ತಿದೆ ಎನ್ನುವ ಅರ್ಥದಲ್ಲಿ ಹೇಳುತ್ತಿದ್ದೀರಿ. ತಾವು ರೈತರಿಗೆ ಕೊಡತಕ್ಕ ಬೀಜದ ಬೆಲೆ ಖಾಸಗಿಯವರು ಕೊಡುವುದಕ್ಕಿಂತ ೨-೩ ಪಟ್ಟು ಜಾಸ್ತಿ ಇರುತ್ತದೆ. ಆಮೇಲೆ ನಿಮಗೆ ಹೆಚ್ಚಿನ ಲಾಭ ಬರಲೇಬೇಕು. ಒಂದುವೇಳೆ ಲಾಭ ಬರುತ್ತಿಲ್ಲ ಎಂದರೆ ನಿಮ್ಮ ಅಧಿಕಾರಿಗಳ ಅದಕ್ಷತೆ, ಅಪ್ರಮಾಣಿಕತೆ ಎಂದು ಹೇಳಬೇಕಾಗುತ್ತದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಗೋರೂರು, ಎಡಗೂರ ಈ ಫಾರಂಗಳು ತಮ್ಮ ಕ್ಷೇತ್ರವಲ್ಲೇ ಇವೆ. ಆದ್ದರಿಂದ ಅಲ್ಲಿ ಯಾವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ನಮಗೆ ತಿಳಿಸಿದರೆ ಅವರಮೇಲೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಷೇರ್‌ಖಾನ್.—ಅಧಿಕಾರಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ. ಅಲ್ಲದೆ ಇವತ್ತು ಈ ಅಗ್ರಿಕಲ್ಚರಲ್ ಫಾರಂಗಳನ್ನು ಕೇಳುವವರೇ ಇಲ್ಲದಂತಾಗಿದೆ.

MR. DEPUTY SPEAKER:...If there is any specific case that may be brought to the notice of the hon. Minister.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಎಡವಾರ ಮತ್ತು ಗೋರೂರು ಫಾರಂಗಳ ವಿಚಾರವನ್ನು ಹೇಳಿದೆ. ಅಲ್ಲಿ ಹತ್ತೂವರೆ ಎಕರೆ ಜಮೀನು ಇದೆ. ೧೯೭೭ ೭೮ರಲ್ಲಿ ತಾವು ಖರ್ಚು ಮಾಡಿದ್ದು ೨೯,೭೩೭ ರೂಪಾಯಿ. ಬಂದಿರತಕ್ಕ ಉತ್ಪತ್ತಿ ೧೨,೭೭೮ ರೂ. ೧೯೭೮-೭೯ರಲ್ಲಿ ೪೭,೯೫೫ ರೂ ಗಳನ್ನು ಖರ್ಚುಮಾಡಿದ್ದೀರಿ. ಬಂದಿರತಕ್ಕ ಉತ್ಪತ್ತಿ ಕೇವಲ ೪ ಸಾವಿರ ರೂ. ೧೯೭೯-೮೦ರಲ್ಲಿ ತಾವು ಖರ್ಚುಮಾಡಿರತಕ್ಕದ್ದು ಬಂದಿರತಕ್ಕ ಉತ್ಪತ್ತಿ ೨೫ ಸಾವಿರ ರೂ. ಆಂದರೆ ಒಳ್ಳೆಯ ತಜ್ಞರು ಇರತಕ್ಕ ಫಾರಂನಲ್ಲೇ ಈರೀತಿ ನಷ್ಟವಾಗುತ್ತಿದೆ ಎಂದು ಹೇಳುವುದಾದರೆ ಇವಕ್ಕೆ ಕಾರಣವೇನು ? ಯಾರಾದರೂ ಉನ್ನತ ಅಧಿಕಾರಿಗಳು ಅಲ್ಲಿಗೆ ಹೋಗಿ ಪರಿಶೀಲಿಸಿದ್ದಾರೆಯೆ ? ಎಂಬುದನ್ನು ತಾವು ತನಿಖೆ ಮಾಡಿಸಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆಗಲಿ ತನಿಖೆ ಮಾಡಿಸುತ್ತೇನೆ.

ಶ್ರೀ ಷೇರ್‌ಖಾನ್.—ಹಿಂದೆ ತಾವು ಸೀಡ್ ಫಾರಂಗೆ ಹೋಗಿ ೧ ಕೆ.ಜಿ.ಗೆ ೨ ರೂ. ನಂತೆ ಬಿತ್ತನೆ ಬೀಜಗಳನ್ನು ತೆಗೆದುಕೊಂಡು ಬರುತ್ತಿದ್ದೆವು. ಈಗ ಏನು ಮಾಡಿದ್ದೀರಿ ಎಂದರೆ ಸೀಡ್ ಕಾರ್ಪೊರೇಷನ್‌ನವರಿಗೇ ಆಧಿಕಾರವನ್ನು ಕೊಟ್ಟಿದ್ದೀರಿ, ಅವರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಂದಕ್ಕೆ ಮೂರುಪಟ್ಟು ಬೆಚ್ಚಿಗೆ ಹಣಕ್ಕೆ ಮಾರಾಟ ಮಾಡುತ್ತಿದ್ದಾರೆ. ಹಿಂದೆ ೨ ರೂ.ಗೆ ೧ ಕೆ.ಜಿ. ಸಿಕ್ಕುತ್ತಿದ್ದುದು ಇವತ್ತು ೬ರೂ. ಆಗಿದೆ. ಇದರಿಂದಾಗಿ ಬಿತ್ತನೆ ಬೀಜವನ್ನು ತೆಗೆದುಕೊಳ್ಳುವವರಿಗೂ ಕಷ್ಟವಾಗುತ್ತಿದೆ, ಆದ್ದರಿಂದ ಮೊದಲು ಇದ್ದಹಾಗೆಯೇ ಸೀಡ್ ಫಾರಂನವರಿಗೇ ಅಧಿಕಾರವನ್ನು ಕೊಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಮೊಹಿದ್ದೀನ್.—ತಮ್ಮ ಉತ್ತರದ ಪ್ರಕಾರ ಪ್ರತಿವರ್ಷ ೧೭ ಲಕ್ಷ ರೂ. ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದೀರಿ. ಒಂದುಕಡೆ ಆಗ್ರಿಕಲ್ಚರಲ್ ಯೂನಿವರ್ಸಿಟಿಯವರು ತಮ್ಮ ಫಾರಂನಲ್ಲಿ ಸೀಡ್ಸ್‌ನ್ನು ಮಲ್ಟಿಪ್ಲಿಕೇಷನ್ ಮಾಡುತ್ತಿದ್ದಾರೆ ಅದೇರೀತಿ ಸರ್ಕಾರೀ ಇಲಾಖೆಯವರೂ ಕೂಡ ಬೇರೆ ಬೇರೆ ಕಡೆ ಫಾರಂಗಳನ್ನು ಇಟ್ಟುಕೊಂಡು ಅದೇ ಕೆಲಸವನ್ನೇ ಮಾಡುತ್ತಿದ್ದಾರೆ. ಆದ್ದರಿಂದ ತಾವೇ ಒಂದು ಕ್ರಮ ತೆಗೆದುಕೊಂಡು ಯಾವುದಾದರೂ ಒಂದೇ ಏಜೆನ್ಸಿಗೆ ಇದನ್ನು ಒಪ್ಪಿಸಿ. ಏಕೆಂದರೆ ಆಗ್ರಿಕಲ್ಚರಲ್ ಯೂನಿವರ್ಸಿಟಿಗೆ ತಾವು ಏನು ಎಂಟರೆಸ್ಟ್ ಮಾಡಿದ್ದೀರಿ ಅದನ್ನು ತಾವೇ ಏತಕ್ಕೆ ನಡೆಸಬಾರದು ? ಹೀಗೆ ಮಾಡುವುದರಿಂದ ರೀಸರ್ಚ್ ಮಾಡುವುದಕ್ಕೂ ಕೂಡ ಅನುಕೂಲವಾಗುತ್ತದೆ ಇದರ ಬಗ್ಗೆ ಸರ್ಕಾರ ಏತಕ್ಕೆ ಯೋಚನೆ ಮಾಡಬಾರದು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರ ಫಾರಂಸ್ ಮತ್ತು ಎಸ್ಟ್ಯಾಬ್ಲಿಷ್‌ಮೆಂಟೇ ಬೇರೆ, ನಮ್ಮ ಇಲಾಖೆಯ ಫಾರಂಸ್ ಮತ್ತು ಎಸ್ಟ್ಯಾಬ್ಲಿಷ್‌ಮೆಂಟೇ ಬೇರೆ, ಆದರೆ ತಾವು ಹೇಳುತ್ತಿರುವುದು ಈ ಕೆಲಸವನ್ನು ಯೂನಿವರ್ಸಿಟಿಯವರಿಗೇ ವಹಿಸುವುದು ಒಂದು ಮಾರ್ಗ, ಅಥವಾ ಯೂನಿವರ್ಸಿಟಿಯವರದ್ದನ್ನೂ ಸರ್ಕಾರದವರೇ ತೆಗೆದುಕೊಂಡು ನಡೆಸುವುದು ಇನ್ನೊಂದು ಮಾರ್ಗ. ತಾವು ಉತ್ತಮ ಸಲಹೆಗಳನ್ನು ಕೊಟ್ಟಿದ್ದೀರಿ. ಇದನ್ನು ನೋಡಿ ಪರಿಶೀಲಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.— ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆಯತಕ್ಕ ಫಾರಂಗಳು ಸಾಮಾನ್ಯವಾಗಿ ಲಾಭದಾಯಕವಾಗಿಯೇ ನಡೆಯುತ್ತಿವೆ. ಅವರು ಸಂಶೋಧನೆ ಮಾಡುತ್ತಾರೆ ಮತ್ತು ಒಳ್ಳೆಯ ಬೀಜವನ್ನೂ ಉತ್ಪಾದನೆ ಮಾಡುತ್ತಾರೆ.....

ಉಪಾಧ್ಯಕ್ಷರು.—ಯಾವುದು ಲಾಭದಾಯಕವಾಗಿ ಆಗುತ್ತಿದೆ ಎಂಬ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಸಚಿವರು ಈಗಾಗಲೇ ಹೇಳಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸರ್ಕಾರೀ ಫಾರಂಗಳಲ್ಲಿ ಪ್ರತಿವರ್ಷ ೧೭ ಲಕ್ಷ ರೂ. ಲಾಸ್ ಆಗುತ್ತಿದೆ. ಈರೀತಿ ಲಾಸ್ ಆಗುವುದಕ್ಕೆ ಕಾರಣ ಏನೆಂಬುದನ್ನು ಕಂಡುಹಿಡಿದು ಯಾವುದಾದರೂ ಫಾರಂ ಮೇಲಾಗಲಿ ಅಥವಾ ಯಾವುದಾದರೂ ಅಧಿಕಾರಿಯ ಮೇಲಾಗಲಿ ನಿಖರವಾದ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಿರ್ದಿಷ್ಟವಾಗಿ ಹೇಳಿದರೆ ಅದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ತಮ್ಮಲ್ಲಿ ಏನಾದರೂ ಮಾಹಿತಿ ಇದ್ದರೆ ದಯವಿಟ್ಟು ಕಳುಹಿಸಿಕೊಟ್ಟರೆ ತನಿಖೆ ನಡೆಸುವುದಕ್ಕೆ ಅನುಕೂಲವಾಗುತ್ತದೆ.

Moharam Incidents in Belgaum City

521. SRI P. A. PAWASHE (Uchagaon).—Will the Chief Minister be pleased to state :—

(a) whether it is a fact that on 8-11-1981 *i. e.* on the last day of Moharam incidents of looting and causing damage to shops and buildings took place in Belgaum City ;